ವೆಟೆರಿನರಿ ಅಮಲದಾರರಿಗೆ ಸೂಚನೆಗಳು.

ವೆಟೆರಿನರಿ ಇನ್‌ಸ್ಪೆಕ್ಟರರು ಜಿಲ್ಲಾ ಕಮಿಟಿಗಳ ಸಭೆಗಳಿಗೆ ಹಾಜರಾಗಬೇಕೆಂದು ಹೇಳಲ್ಪಟ್ಟಾಗ್ಯೆ ಅವರು ಹಾಗೆ ಹಾಜರಾಗಿ ಪಶುವೈದ್ಯಕೀಯ ವಿಷಯಗಳಿಗೆ ಸಂಬಂಧಿಸಿರುವ ಮಟ್ಟಿಗೆ ಸದರಿ ಕಮಿಟಿಗಳಿಗೆ ಅವುಗಳ ಕೆಲಸದಲ್ಲಿ ಸಹಾಯ ಮಾಡುವರು.

ವೆಟೆರಿನರಿ ಅಸಿಸ್ಟಂಟ ಸರ್ಜನರು ತಾಲೂಕಾ ಮತ್ತು ಗ್ರಾಮಗಳ ಕಮಿಟಿಗಳ ಸಭೆಗಳಿಗೆ ಹಾಜರಾಗಬೇಕೆಂದು ಹೇಳಲ್ಪಟ್ಟರೆ, ಅವರು ಹಾಗೆ ಹಾಜರಾಗಿ ಪಶುವೈದ್ಯಕೀಯ ವಿಷಯಗಳ ಮೇಲೆ ಆಲೋಚನೆ ಕೊಟ್ಟು ಸಹಾಯ ಮಾಡುವರು.

ಯಾವತ್ತು ಅಮಲದಾರರು ಈ ಚಳವಳಿಯ ಕೆಲಸಗಾರರಿಗೆ ತಮಗೆ ಶಕ್ಯ ವಿರುವಷ್ಟು ಯಾವತ್ತು ಸಹಾಯ ಮಾಡುವರು ಮತ್ತು ಆದಷ್ಟು ಮಟ್ಟಿಗೆ ಅವರ ಸಂಗಡ ವ್ಯವಹಾರವನ್ನಿಡುವರು. ಇದಲ್ಲದೆ ಅವರು ಈ ಕೆಳಗಿನ ಸೂಚನೆಗಳನ್ನು ಅಮಲಿನಲ್ಲಿ ತಂದು ಚಳವಳಿಗೆ ಸಹಾಯ ಮಾಡುವರು.

ದನಗಳ ಮಾಲಿಕರ ಮನಸ್ಸಿನ ಮೇಲೆ ಈ ಕೆಳಗಿನ ವಿಷಯಗಳನ್ನು ಯಾವಾಗಲೂ ಬಿಂಬಿಸಬೇಕು :—

(೧) ದನಗಳಿಂದ ಸಂಪೂರ್ಣ ಉಪಯೋಗ ಪಡೆಯಬೇಕಾದರೆ ಅವುಗಳನ್ನು ಉತ್ತಮ ದೇಹಸ್ಥಿತಿಯಲ್ಲಿ ಇಡಬೇಕು. ಉತ್ತಮ ದೇಹಸ್ಥಿತಿಯನ್ನುಂಟುಮಾಡಲಿಕ್ಕೆ,—

(ಅ) ಅವುಗಳನ್ನು, ಚನ್ನಾಗಿ ಹವೆಯಾಡುವ, ಹೊಲಸು ಚನ್ನಾಗಿ ಹರಿದುಹೋಗುವ ಮತ್ತು ಬಹಳ ಬೆಳಕುಳ್ಳ ಚಪ್ಪರಗಳಲ್ಲಿ ಇಡಬೇಕು. ಈ ಚಪ್ಪರಗಳು ಜನವಸತಿಯ ಸ್ಥಾನಗಳಿಂದ ಕೆಲವು ಅಂತರದ ಮೇಲಿರಬೇಕು,. ನೆಲದ ಪಾತಳಿಯು ಸುತ್ತಲಿನ ಭೂಮಿಯ ಪಾತಳಿಗಿಂತ ಎತ್ತರವಾಗಿರಬೇಕು ಮತ್ತು ನೆಲಗಳನ್ನು ನೀರು ಸೇರದ ದಪ್ಪವಾದ ಸಾಧನದಿಂದ ಚನ್ನಾಗಿ ಮಾಡಿರಬೇಕು ಮತ್ತು ಯೋಗ್ಯವಾಗಿ ಇಳಿಜಾರಾಗಿ ಮಾಡಿರಬೇಕು. ಮೇವು ಲುಕ್ಸಾನಾಗುವದನ್ನು ಮತ್ತು ಕೆಡುವದನ್ನು ನಿಲ್ಲಿಸುವದಕ್ಕೆ ಯೋಗ್ಯ ಗೋದಲಿಗಳ ವ್ಯವಸ್ಥೆ ಮಾಡಬೇಕು;

(ಬ) ಅವುಗಳಿಗೆ ನಿಯಮಿತವಾಗಿ ಹೊಟ್ಟೆಗೆ ಹಾಕಬೇಕು ಮತ್ತು ನೀರು ಕುಡಿಸಬೇಕು. ಚಲೋ ಆಹಾರವು ಮತ್ತು ಸ್ವಚ್ಛ ನೀರು ಅವಶ್ಯವಾಗಿರುತ್ತವೆ;

(ಕ) ಅವುಗಳನ್ನು ಸ್ವಚ್ಛವಾಗಿ ಮತ್ತು ಹೊರಗಿನ ಹುಳಗಳ ಬಾಧೆಯಾಗದಂತೆ ಇಡಬೇಕು. ಹುಳಗಳು ಸತತವಾಗಿ ಕಡಿದು ತ್ರಾಸ ಕೊಡುವದರಿಂದ ಜನಾವರದ ಶಕ್ತಿಯು ಕಡಿಮೆಯಾಗುತ್ತದೆ ಮತ್ತು ಅದು ಕ್ಷೀಣವಾಗಿ ಕೆಲಸವನ್ನು ಸರಿಯಾಗಿ ಮಾಡಲಸಮರ್ಥವಾಗುತ್ತದೆ.

(೨) ದೂರದೃಷ್ಟಿಯಿಂದ ನೋಡಿದರೆ, ಹೆಚ್ಚು ಒಜ್ಜೆ ಹೇರುವದರಿಂದಲೂ, ಮಿತಿಮೀರಿ ಉಪಯೋಗಿಸುವದರಿಂದಲೂ ಕೊನೆಗೆ ನಷ್ಟವುಂಟಾಗುತ್ತದೆ, ಯಾಕಂದರೆ, ಅದರಿಂದ ಜನಾವರವು ಅಕಾಲಿಕವಾಗಿ ಕ್ಷೀಣವಾಗುತ್ತದೆ.

(೩) ಕೆಟ್ಟವಾದ ಮತ್ತು ಯೋಗ್ಯ ಕೆಲಸ ಮಾಡಲಸಮರ್ಥವಾದ ದನಗಳ ಹೊಟ್ಟೆಯ ಖರ್ಚು ಚಲೋ ಮತ್ತು ಒಳಿತಾಗಿ ಕೆಲಸ ಮಾಡುವ ದನಗಳಷ್ಟೇ ಬರುವದು, ಆದರೆ ಅವುಗಳಿಂದ ಅಷ್ಟೇ ಪರಿಮಾಣದ ಕೆಲಸವು ದೊರೆಯುವದಿಲ್ಲ. ಆದ್ದರಿಂದ ಚನ್ನಾಗಿರುವ ದನಗಳನ್ನಷ್ಟೇ ಸಾಕುವದು ಲಾಭಕರವು.

(೪) ನಿರುಪಯೋಗಿಯಾದ ಅನೇಕ ದನಗಳನ್ನು ಸಾಕಿದರೆ ನಷ್ಟವುಂಟಾಗುವದು.- ಉಪಯೋಗಕರವಾದ ದನಗಳಿಗೆ ಉಪಯೋಗಕ್ಕೆ ಬೀಳುವ ಆಹಾರವನ್ನು ಅವು ತಿಂದುಬಿಡುತ್ತವೆ.

(೫) "ಯಾವದೊಂದರಿಂದ ಹುಟ್ಟಿದ್ದು ಅದರಂತೆಯೇ ಇರುತ್ತದೆ" ಎಂಬ ಮಾತನ್ನು ದನಗಳ ಸಂತತಿ ವರ್ಧಕರು ನೆನಪಿನಲ್ಲಿಡಬೇಕು. ಚಲೋ ದನಗಳು ಹುಟ್ಟಬೇಕಾದರೆ, ಒಳ್ಳೇ ತಳಿಯನ್ನು ಉಪಯೋಗಿಸಬೇಕು. ಕೀಳ ತರದ ಹೋರಿಗಳನ್ನು ಆದಷ್ಟು ಬೇಗನೆ ಬಿಟ್ಟುಬಿಡಬೇಕು. ಬೀಜ ತೆಗೆಯುವ ಕೆಲಸವು ಈಗ ಸರಳವಾದ ವಿಷಯವಾಗಿದೆ, ಮತ್ತು ಚಲೋ ಹೋರಿಗಳೂ ದೊರೆಯುತ್ತವೆ.

(೬) ಚಿಕ್ಕ ವಯಸ್ಸಿನ ದನಗಳ ಕಡೆಗೆ ವಿಶೇಷ ಲಕ್ಷ್ಯಗೊಡಿರಿ. ಅನೇಕ ಚಲೋ ದನಗಳು ಚಿಕ್ಕ ವಯದಲ್ಲಿ ತಾತ್ಸಾರ ಮಾಡಲ್ಪಡುವದರಿಂದ ಕೆಟ್ಟು ಹೋಗುತ್ತವೆ.

(೭) ದನದ ಸಂತತಿ ವರ್ಧನದ ಕಾರಣಗಳ ಸಲುವಾಗಿ, ಹದಕ್ಕೆ ಬಂದಿರದಿದ್ದ ದನಗಳನ್ನು ಉಪಯೋಗಿಸಬೇಡಿರಿ. ಆದಷ್ಟು ಮಟ್ಟಿಗೆ, ಹದಕ್ಕೆ ಬಂದಿರದಿದ್ದ ಹೆಣ್ಣು ಮತ್ತು ಗಂಡು ದನಗಳನ್ನು ಬೇರೆ ಬೇರೆ ಇಡಿರಿ.

(೮) ದನಗಳಿಗಾದ ಸಣ್ಣ ಗಾಯಗಳನ್ನು ತಾತ್ಸಾರ ಮಾಡುವದರಿಂದ ಅವುಗಳ ಕೆಲಸ ಮಾಡುವ ಶಕ್ತಿಯು ಕಡಿಮೆಯಾಗುತ್ತದೆ. ಪಿತ್ತದ ಗಂಟುಗಳಿಂದ ತೊಂದರೆಯನ್ನು ಅನುಭೋಗಿಸುತ್ತಿದ್ದ ಜನಾವರಗಳನ್ನು ಕೆಲಸಕ್ಕೆ ಹಚ್ಚಬಾರದೆಂಬದರ ಮತ್ತು ಸಣ್ಣ ಗಾಯಗಳನ್ನು ನೊಣಗಳ ತ್ರಾಸವಾಗದಂತೆ ಮತ್ತು ಸ್ವಚ್ಛವಾಗಿರುವಂತೆ ಇಡುವೆದರ ಮಹತ್ವವನ್ನು ದನಗಳ ಮಾಲಿಕರ ಮನಸ್ಸಿನ ಮೇಲೆ ಬಿಂಬಿಸಬೇಕು.

(೯) ಶಕ್ತಿಹೀನವಾದ ಜನಾವರಗಳಿಂದ ನಷ್ಟವೇ ಉಂಟಾಗುತ್ತದೆ. ಶಕ್ತಿಯು ಕ್ರಮೇಣ ಕಡಿಮೆಯಾಗುತ್ತ ಹೋಗುವ ಸಂಗತಿಗಳಲ್ಲಿ ಪಶು ವೈದ್ಯರ ಆಲೋಚನೆಯನ್ನು ಯಾವಾಗಲೂ ಕೇಳಬೇಕು. ಅನೇಕ ಸಂಗತಿಗಳು ನಿವಾರಣೆ ಮಾಡಬಹುದಾದಂಥ ಕಾರಣಗಳ ಮೂಲಕ ಉಂಟಾಗಿರಬಹುದು, ಮತ್ತು ಯೋಗ್ಯವಾಗಿ ಉಪಚಾರ ಮಾಡಿದರೆ, ಅನೇಕ ಬೆಲೆಯುಳ್ಳ ಜನಾವರಗಳ ಪ್ರಾಣವನ್ನು ಉಳಿಸಬಹುದು. ಗುಣಹೊಂದಲಿಕ್ಕೆ ಅಶಕ್ಯವಿರುವ ಜನಾವರಗಳನ್ನು ನಾಶಪಡಿಸುವ ವ್ಯವಸ್ಥೆ ಮಾಡಬೇಕು.

(೧೦) ರೋಗವುಂಟಾದ ಯಾವತ್ತು ಬಾಬತುಗಳಲ್ಲಿ, ಜನಾವರಗಳನ್ನು ಆಸ್ಪತ್ರಿಗೆ ಅಥವಾ ಚಿಕಿತ್ಸಾಲಯಕ್ಕೆ ಕೂಡಲೆ ಒಯ್ಯಬೇಕು, ಆದರೆ ಅವು ಗುಣಹೊಂದುವದು ಅಶಕ್ಯವಾಗುವವರೆಗೆ ಅಥವಾ ಗುಣಹೊಂದಲಿಕ್ಕೆ ಬಹಳ ವೇಳೆ ಬೇಕಾಗುವಂತಾಗುವವರೆಗೆ ಹಾದಿ ನೋಡಬಾರದು. ಅನೇಕ ಬಾಬತುಗಳಲ್ಲಿ, ಉಪಚಾರವನ್ನು ಹೊಂದುತ್ತಿದ್ದ ಜನಾವರದ ಹೊಟ್ಟೆಯ ಖರ್ಚು, ರೋಗದ ಪ್ರಾರಂಭಾವಸ್ಥೆಯಲ್ಲಿ ತಾತ್ಸಾರ ಮಾಡುವ ಮೂಲಕವಾಗಿಯೇ, ಅತಿಶಯವಾಗಿಯೂ ಮಾಲಿಕನ ಶಕ್ತಿಗೆ ಮೀರಿಯೂ ಬೆಳೆಯುವದು.

(೧೧) ಯಾವತ್ತು ರೋಗಗಳ ನಿವಾರಣೋಪಾಯವೆಂದು ಜನಾವರಕ್ಕೆ ಬರೆ ಹಾಕುವದನ್ನು ನಿಲ್ಲಿಸಬೇಕು. ಬಹುಶಃ ಯಾವತ್ತು ಬಾಬತುಗಳಲ್ಲಿ ಅದು ಉಪಾಯವಲ್ಲವೇ ಅಲ್ಲ, ಮತ್ತು ಅದರಿಂದ ಜನಾವರಕ್ಕೆ ಮಾತ್ರ ಅನಾವಶ್ಯಕ ನೋವು ಉಂಟಾಗುತ್ತದೆ ಮತ್ತು ಕೊನೆಗೆ ತೊಗಲಿನ ಬೆಲೆಯೂ ಕಡಿಮೆಯಾಗುತ್ತದೆ.

(೧೨) ತಗ್ಗು ಪ್ರದೇಶದಲ್ಲಿರುವ ತೇವಿನ ಹುಲ್ಲುಬನ್ನಿಗಳಲ್ಲಿ ಮೇಯಿಸುವದನ್ನು ಬಿಟ್ಟುಬಿಡಬೇಕು. ಇಂಥ ಹುಲ್ಲುಬನ್ನಿಗಳಿಂದ ಅನೇಕ ವೇಳೆ ರೋಗಗಳು ಉತ್ಪನ್ನವಾಗುತ್ತವೆ.

(೧೩) ರೋಗದೂಷಿತವಿರುವವೆಂದು ಗೊತ್ತಾದ ಹುಲ್ಲುಬನ್ನಿಗಳನ್ನು ಬಿಟ್ಟುಬಿಡಬೇಕು. ಇಂಥ ಹುಲ್ಲುಬನ್ನಿಗಳನ್ನು ಬಹಳ ಕಾಲದ ವರೆಗೆ ಬಿಟ್ಟುಬಿಡುವದರಿಂದ ಅನೇಕ ವೇಳೆ ಅವು ಚನ್ನಾಗಿ ಆಗುತ್ತವೆ.

(೧೪) ರೋಗವುಂಟಾದ ನಂತರ ಆದಷ್ಟು ಬೇಗನೆ ತಿಳಿಸುವದು ಅವಶ್ಯವಿರುತ್ತದೆ. ಯಾವದಾದರೊಂದು ಬೇನೆಯು ಒಂದು ಜನಾವರಗಳ ಗುಂಪು ಅಥವಾ ಹಿಂಡಿನಲ್ಲಿ ಸ್ಥಿರವಾಗಿ ಊರಿಕೊಂಡ ನಂತರ ಅದನ್ನು ನಿರ್ಬಂಧನೆಯಲ್ಲಿ ತರುವದಕ್ಕಿಂತ ಅದನ್ನು ಅದರ ಪ್ರಾರಂಭಾವಸ್ಥೆಯಲ್ಲಿಯೇ ನಿರ್ಬಂಧಿಸುವದು ಹೆಚ್ಚು ಸುಲಭವಾಗಿರುತ್ತದೆ.

(೧೫) ನಿವಾರಣೋಪಾಯವೆಂದು ಮೈಲಿ ತೆಗೆಯುವದಕ್ಕೆ ಅಥವಾ ರಸಿಕೆಯನ್ನು ಚುಚ್ಚುವದಕ್ಕೆ ತಕರಾರು ಮಾಡುವದು ಅನೇಕ ವೇಳೆ ಮೂಢ ಭಾವನೆಯ ಪರಿಣಾಮವಾಗಿದೆ. ಇಂಥ ಮೂಢಭಾವನೆಯನ್ನು ಕಿತ್ತೊಗೆಯಲಿಕ್ಕೆ ಪ್ರಯತ್ನಿಸಬೇಕು, ಮತ್ತು ಸವಿೂಪದ ಹಳ್ಳಿಗಳಲ್ಲಿ ರೋಗನಿವಾರಕ ಉಪಚಾರದಿಂದ ಉಂಟಾದ ಲಾಭವನ್ನು ತೋರಿಸಿಕೊಡುವದು ಶಕ್ಯವಿದ್ದರೆ, ಹಾಗೆ ಮಾಡಬೇಕು, ಯಾಕಂದರೆ ಅದರಿಂದ ಮೂಢಭಾವನೆಯನ್ನು ಹಿಮ್ಮೆಟ್ಟಲಿಕ್ಕೆ ಬಹಳ ಸಹಾಯವಾಗುವದು.

ನಿಮ್ಮ ಕೆಲಸಗಳು ದನಗಳ ವಿಷಯದಲ್ಲಿ ಮಾತ್ರ ಇರುವವೆಂದು ತಿಳಿಯಬೇಡಿರಿ. ಕುರಿ ಮತ್ತು ಆಡುಗಳ ಬಗ್ಗೆ ಸಹ ಬಹಳ ಕೆಲಸ ಮಾಡತಕ್ಕದ್ದದೆ. ಕುರುಬನು ಅಂಜಬುರುಕ ಮನುಷ್ಯನಿರುತ್ತಾನೆ ಮತ್ತು ಅವನ ಪರಿಚಯ ಮಾಡಿಕೊಳ್ಳುವದು ಸುಲಭವಲ್ಲ. ಅವನ ನಂಬಿಗೆಯನ್ನು ಗಳಿಸಲಿಕ್ಕೂ, ಅವನು ತನ್ನ ತೊಂದರೆಗಳನ್ನು ನಿಮ್ಮೊಡನೆ ಬಿಚ್ಚಿ ಹೇಳುವಂತೆ ಮಾಡಲಿಕ್ಕೂ ಪ್ರಯತ್ನ ಮಾಡಿರಿ. ಸಂತತಿ ಬೆಳಿಸುವ ಸುಧಾರಿಸಿದ ಪದ್ಧತಿಗಳ ಹೊರ್ತಾಗಿ, ಹಿಂಡುಗಳನ್ನು ಸತತವಾಗಿ ಬಾಧಿಸುವ ರೋಗ ಕ್ರಿಮಿಗಳಿಂದ ಅವುಗಳನ್ನು ಮುಕ್ತ ಮಾಡಿದರೆ, ಅವುಗಳ

ಉಣ್ಣೆಯೂ, ಕೂದಲೂ ಮತ್ತು ಸಾಮಾನ್ಯ ಆರೋಗ್ಯವೂ ಚನ್ನಾಗಿ ಸುಧಾರಿಸ ಬಹುದು. ಇವುಗಳಲ್ಲಿಯ ಅನೇಕ ರೋಗಗಳ ಉಪಚಾರವು ಸಾದಾ ತರದ್ದೂ ಸುಲಭವಾಗಿ ಅಮಲಿನಲ್ಲಿ ತರಲಿಕ್ಕೆ ಬರುವಂಥಾದ್ದೂ ಇರುತ್ತದೆ.

ನೀವು ಲಕ್ಷ್ಯವನ್ನು ಪೂರ್ತಿಸಬೇಕಾದ ಪ್ರಾಣಿಗಳ ಮತ್ತೊಂದು ವರ್ಗವೆಂದರೆ ಕೋಳಿಗಳು. ಸಂತತಿ ಬೆಳಿಸುವ ಸುಧಾರಿಸಿದ ಪದ್ಧತಿಗಳಿಂದ ಮತ್ತು ವ್ಯವಸ್ಥೆಯಿಂದ ಲಾಭವಾಗುವದು, ಮತ್ತು ತಪಾಸಣೆ ಮಾಡತಕ್ಕ ಮತ್ತು ನಿರ್ಬಂಧನೆಯಲ್ಲಿಡತಕ್ಕ ರೋಗಗಳು ಬಹಳವಿರುತ್ತವೆ.

ಸ್ವಂತ ನಿಮ್ಮ ಮಾಲಕಿಯ ಜನಾವರಗಳಿದ್ದರೆ ಅಥವಾ ನಿಮ್ಮ ಕುಟುಂಬದವರ ಮಾಲಕಿಯ ಜನಾವರಗಳಿದ್ದರೆ, ನೀವು ಎರಡನೆಯವರಿಗೆ ಏನು ಮಾಡಬೇಕೆಂದು ಉಪದೇಶ ಮಾಡುತ್ತಿರುವಿರೋ ಅದನ್ನು ನಿಮ್ಮ ಸ್ವಂತ ಜನಾವರಗಳ ವಿಷಯದಲ್ಲಿ ಮಾಡಿರಿ ಮತ್ತು ಈ ರೀತಿಯಿಂದ, ನಿಮ್ಮ ನೆರೆಹೊರೆಯವರ ಜನಾವರಗಳ ಸಾಮಾನ್ಯ ಸ್ಥಿತಿಯನ್ನು ಸುಧಾರಿಸಲಿಕ್ಕೆ ಏನು ಮಾಡಬಹುದೆಂಬದನ್ನು ಉದಾಹರಣೆಯಿಂದ ತೋರಿಸಿಕೊಡಿರಿ.